# Government of Karnataka
# Deposition Sheet Form No. R.P. 57

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 11
ಪಿ ಡಬ್ಲ್ಯೂ- 12

| | |
|---|---|
| ಸಾಕ್ಷಿದಾರರ ಹೆಸರು | ಃ- ದೀಪಕ್ |
| ತಂದೆಯ ಹೆಸರು | ಃ- ರಮೇಶ ಬೂಸರೆಡ್ಡಿ |
| ವಯಸ್ಸು | ಃ- 46 ವರ್ಷ |
| ಉದ್ಯೋಗ | ಃ- ಪಿ.ಐ. ಡಿ.ಜಿ.ಓ ಕಚೇರಿ ಬೆಂಗಳೂರು |
| ವಾಸಸ್ಥಳ | ಃ- ಬೆಂಗಳೂರು |

ದಿ.10-03-2026 ರಂದು ಸಾಕ್ಷಿಯನ್ನು ವಿಡಿಯೋ ಕಾನ್ಫಿರೆನ್ಸ್ ಮೂಲಕ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ.**

ದಿನಾಂಕ 18-07-2019 ರಿಂದ 08-10-2021 ವರೆಗೆ ನಾನು ಸಿ.ಪಿ.ಐ ಎಂದು ಮಸ್ಕಿ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 25-08-2019 ರಂದು ನಾನು ಗಸ್ತು ಲಿಂಗಸುಗೂರು ಪಟ್ಟಣದಲ್ಲಿ ಮಾಡುತ್ತಿರುವಾಗ ವಶಕ್ಕೆ ಪಡೆದುಕೊಂಡ ಆರೋಪಿ ಸೈಯದ್ ಈತನು ತನ್ನ ಪೇಸ್ ಬುಕ್ ಖಾತೆಯಲ್ಲಿ ಶಿವಾಜಿ, ಸಂಗೋಳ್ಳಿ ರಾಯಣ್ಣ ಮತ್ತು ವಾಲ್ಮಿಕಿ ರವರ ಭಾವಚಿತ್ರಗಳ ಮೇಲೆ ಟಿಪ್ಪುಸುಲ್ತಾನರವರು ಎಡಗಾಲನ್ನು ಶಿವಾಜಿಯವರ ತಲೆಯ ಮೇಲೆ ಇಟ್ಟಂತೆ ಭಾವಚಿತ್ರವನ್ನು ಸಾಮಾಜಿಕ ಜಾಲತಾನದಲ್ಲಿ ಹರಿ ಬಿಟ್ಟು ಹಿಂದೂ ಧರ್ಮದವರ ಭಾವನೆಗೆ ಧಕ್ಕೆಯುಂಟು ಮಾಡಿದ ಬಗ್ಗೆ ಕೇಸು ದಾಖಲಾಗಿತ್ತು ಎಂದು ತಿಳಿದು ಬಂದಿರುತ್ತದೆ. ಆ ಹಿನ್ನೆಲೆಯಲ್ಲಿ ನಾನು ಲಿಂಗಸುಗೂರಿನಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆ. ಚಾ.ಸಾ-1 ರವರು ಆರೋಪಿಯಾದ ಸೈಯದ್ ಬಿನ್ ಅಹಮ್ಮದ್ ರವರನ್ನು ಕ್ರೈಮ್ ನಂ.201/2019 ಕಲಂ.295(ಎ) ಅಡಿಯಲ್ಲಿ ನ್ಯಾಯಾಂಗ ಬಂದನಕ್ಕೆ ಒಪ್ಪಿಸಲು ಜೀಪ್ ನಂ.ಕೆಎ-36, ಜಿ-128 ರಲ್ಲಿ ಹೋಗುತ್ತಿರುವಾಗ ಅರಣ್ಯ ಇಲಾಖೆಯ ಕಾರ್ಯಾಲಯದ ಮುಂದೆ ಸುಮಾರು 25-30 ಜನ ಸೇರಿ ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿ ಅವನನ್ನು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು ಲೇ ಸೂಳೆ ಮಕ್ಕಳೆ ಅವನನ್ನು ಎಲ್ಲಿಗೆ ಕರೆದಕೊಂಡು ಹೋಗುತ್ತಿದ್ದಿರಿ ಎಂದು ಅವಾಚ್ಯವಾಗಿ ಬೈದು ಅವರ ಕರ್ತವ್ಯಕ್ಕೆ ಅಡ್ಡಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಚಾ.ಸಾ-9 ಮತ್ತು 10 ರವರು ಸ್ಥಳಕ್ಕೆ ಬಂದು ಪ್ರತಿಭಟನೆ ಮಾಡುವುದು ಕಾನೂನು ಬಾಹಿರ ಎಂದು ತಿಳಿ ಹೇಳಿ ಗುಂಪನ್ನು ಚದುರಿಸಿರುತ್ತೇವೆ. ಅವರು

ಮಾತನ್ನು ಕೇಳದೆ ಅಲ್ಲಿಯೇ ಇದ್ದ ಕಲ್ಲುಗಳನ್ನು ಮತ್ತು ಕಟ್ಟಿಗೆ ಹಿಡಿದುಕೊಂಡು ಪ್ರತಿಭಟನೆ ಮಾಡಿ ಜೀಪನ್ನು ಮುಂದೆ ಹೋಗದಂತೆ ತಡೆದಿರುತ್ತಾರೆ. ನಾವು ಅವರನ್ನು ಹೇಳಿ ಕಳುಹಿಸುತ್ತಿರುವಾಗ 7-8 ಜನರು ಚಾ.ಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿ ಕಲ್ಲುಗಳನ್ನು ತೂರಾಡಿ ಜೀಪಿನ ಹಿಂದಿನ ಬಾಗವನ್ನು ಜಖಂಗೊಳಿಸಿರುತ್ತಾರೆ. ಬೆಂಗಾವಲು ಸಿಬ್ಬಂದಿಯವರಾದ ಚಾ.ಸಾ-4 ರಿಂದ 7 ರವರಿಗೆ ಕಲ್ಲುಗಳನ್ನು ತೂರಾಡಿದ್ದರಿಂದ ಸಣ್ಣ-ಪುಟ್ಟ ಗಾಯಗಳಾಗಿರುತ್ತವೆ. ನಂತರ ನಾವು ಅವರನ್ನು ಕಳುಹಿಸಿ ಕೊಟ್ಟಿರುತ್ತೇವೆ.

2. ಸಾರ್ವಜನಿಕರಿಂದ 7-8 ಜನ ಆರೋಪಿತರ ಹೆಸರುಗಳನ್ನು ಕೇಳಲಾಗಿ ದುರಗೇಶ ತಂದೆ ಸಣ್ಣಯಮನಪ್ಪ, ಯಮನೂರು ತಂದೆ ಪರಶುರಾಮ, ಗುಂಡಪ್ಪ ಮತ್ತು ಯಮನಪ್ಪ, ಚಂದಪ್ಪ ತಂದೆ ಓಬಣ್ಣ ಎಂದು ತಿಳಿದು ಬಂದಿರುತ್ತದೆ. ದಿನಾಂಕ 31-08-2019 ರಂದು ಲಿಂಗಸುಗುರು ಠಾಣೆಗೆ ಹಾಜರಾಗಿದ್ದು 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಚಾ.ಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿದ ತಿರುಪತಿ ಅವರ ಬಗ್ಗೆ ಮಾಹಿತಿ ತಿಳಿದು ಹೇಳಿಕೆ ಕೊಟ್ಟಿರುತ್ತೇನೆ. ದಿನಾಂಕ 05-09-2019 ರಂದು ಠಾಣೆಗೆ ಹಾಜರಾಗಿ ಇನ್ನೂಳಿದ ಆರೋಪಿಗಳಾದ ರವಿಕುಮಾರ, ಗಂಗಾಧರ, ತಿರುಪತಿ ಮತ್ತು ಕೇಶವ ವಿಡಿಯೋ ಚಿತ್ರಿಕರಣವನ್ನು ನೋಡಿ ಗುರುತಿಸಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 2, 4, ರಿಂದ 7 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿ.ಪಿ-4 ರಿಂದ 7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಕಲ್ಲು ಮತ್ತು ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಶ್ರೀ.ಎಸ್.ಎಮ್.ಪಿ ವಕೀಲರಿಂದ 2 ರಿಂದ 4 ಮತ್ತು 6 ನೇ ಆರೋಪಿತರ ಪರವಾಗಿ:-</u>**

ಆ ದಿನ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸುಮಾರು 10 ಪ್ರಕರಣಗಳು ದಾಖಲಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಸಿ.ಸಿ.ನಂ.26/2023 ರಲ್ಲಿ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದನೆ ಎಂದರೆ ಸರಿ. ಸಿ.ಸಿ.ನಂ.26/2023 ರಲ್ಲಿ ಆರೋಪಿತರು ಬಿಡುಗಡೆಯಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಪೋಲಿಸ್ ಠಾಣೆಯ ಆವರಣದಲ್ಲಿ ಸುಮಾರು 500-600 ಜನ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಕೃತ್ಯ ಎಸಗಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಲ್ಲಿ ಯಾರ ಕೈಯಲ್ಲಿ ಕಟ್ಟಿಗೆ ಮತ್ತು ಕಲ್ಲುಗಳು ಇದ್ದವು ಎಂದು ನನಗೆ ನಿಖರವಾಗಿ ಹೇಳಲಾಗುವದಿಲ್ಲ. 25-30 ಜನರಲ್ಲಿ ಜೀಪಿಗೆ ಯಾರು ಕಲ್ಲು ಎಸೆದಿದ್ದಾರೆ ಎಂದು ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಎಷ್ಟು ಜನ ಸಾರ್ವಜನಿಕರು ಇದ್ದರು ಎಂದು ನನಗೆ ನೆನಪಿಲ್ಲ. ಘಟನೆಯಲ್ಲಿ ಯಾರ ಕೈಯಲ್ಲಿ ಕಲ್ಲುಗಳು ಇದ್ದವು ಯಾರ

ಕೈಯಲ್ಲಿ ಕಟ್ಟಿಗೆ ಇದ್ದವು ಮತ್ತು ಯಾರು ಜೀಪನ್ನು ಅಡ್ಡಗಟ್ಟಿದರು ಎಂದು ನಿಖರವಾಗಿ ಹೇಳಲಾಗುವದಿಲ್ಲ. ಆರೋಪಿಗಳ ಪೈಕಿ ಯಾರು ಕಲ್ಲುಗಳಿಂದ ಮತ್ತು ಕಟ್ಟಿಗೆಯಿಂದ ಹಲ್ಲೆ ಮಾಡಿದ್ದಾರೆ ಎಂದು ನನಗೆ ನಿಖರವಾಗಿ ಹೇಳಲಾಗುವದಿಲ್ಲ. ಆ ದಿನ ಸುಮಾರು 500-1000 ಜನ ಸೇರಿದ್ದು ನಿಜವಾದ ಆರೋಪಿತರನ್ನು ಗುರುತಿಸದೆ ಸ್ಥಳದಲ್ಲಿ ಸಣ್ಣ ವ್ಯಾಪಾರಿಗಳಾದ ಹಣ್ಣು, ತರಕಾರಿ ಮತ್ತು ಮೀನಿನ ವ್ಯಾಪಾರಿಗಳ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಆರೋಪಿತರ ಹೆಸರು ಗೊತ್ತಿರಲಿಲ್ಲ ಸಾರ್ವಜನಿಕರಿಂದ ತಿಳಿದು ಬಂದಿರುತ್ತದೆ ಎಂದರೆ ಸರಿ. ಯಾವ ಆರೋಪಿತರು ಕಲ್ಲುಗಳನ್ನು ಬೀಸಿರುತ್ತಾರೆ ಎಂದು ಹೇಳಲಾಗುವದಿಲ್ಲ. ಅರಣ್ಯ ಇಲಾಖೆಯ ಮುಂದೆ ಸುಮಾರು 50-60 ಜನ ಸೇರಿದ್ದರು. ಆರೋಪಿಗಳ ಪೈಕಿ ಯಾರು ಜೀಪನ್ನು ಅಡ್ಡಗಟ್ಟಿರುತ್ತಾರೆ ಎಂದು ಹೇಳಲಾಗುವದಿಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

3. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಪೋಲಿಸರಿಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಎಸ್.ಹೆಚ್.ಜಿ ವಕೀಲರಿಂದ 1 ನೇ ಆರೋಪಿಯ ಪರವಾಗಿ:-**

ಮೇಲಿನ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ಪಾಟೀ ಸವಾಲು: ಶ್ರೀ.ಹೆಚ್.ಬಿ ವಕೀಲರಿಂದ 7 ನೇ ಆರೋಪಿಯ ಪರವಾಗಿ:-**

ಮೇಲಿನ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.